**ಕರ್ನಾಟಕ ಸರ್ಕಾರ**
**(ತಾಂತ್ರಿಕ ಶಿಕ್ಷಣ ಇಲಾಖೆ)**

ಸಂಖ್ಯೆ: ಸಿಟಿಇ 21 ಡಿವಿಪಿ (1) 2021

ಆಯುಕ್ತರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು- 560 001.
ದಿನಾಂಕ 20.12.2021

**: ಅಧಿಕೃತ ಜ್ಞಾಪನ :**

**ವಿಷಯ:** ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ನಿಯಮಾನುಸಾರ ವರ್ಷವಾರು ಸರ್ಕಾರಕ್ಕೆ ಜಮೆ ಮಾಡದೇ ಉಳಿಸಿಕೊಂಡಿರುವ ಬೋಧನಾ ಶುಲ್ಕ ಹಾಗೂ ಅಭಿವೃದ್ಧಿ ಶುಲ್ಕವನ್ನು ಕೂಡಲೇ ಸರ್ಕಾರಕ್ಕೆ ಜಮೆ ಮಾಡುವ ಬಗ್ಗೆ

**ಉಲ್ಲೇಖ** ಮಹಾಲೇಖಪಾಲರ ಲೆಕ್ಕಾಧಿಕಾರಿಗಳ ಆಡಿಟ್ ಪ್ಯಾರ Pr.-AG(Audit-I)/AMG-III/DP Cell/2021-22, ದಿನಾಂಕ 02.11.2021

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಇಲಾಖೆಯ ಅಧೀನದಲ್ಲಿರುವ ಎಲ್ಲಾ ಅನುದಾನಿತ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳಿಂದ 2010 ರಿಂದ 2020 ರವರೆಗೆ ವರ್ಷಾವಾರು ಸರ್ಕಾರಕ್ಕೆ ಜಮೆ ಮಾಡಬೇಕಾದ ಹಾಗೂ ಮಾಡಿರುವ ಬೋಧನಾ ಶುಲ್ಕ- ಅಭಿವೃದ್ಧಿ ಶುಲ್ಕದ ವಿವರವನ್ನು ಪಡೆದು ಮಹಾಲೇಖಪಾಲರ ಲೆಕ್ಕಾಧಿಕಾರಿಗಳ ಪರಿಶೀಲನೆಗೆ ಸಲ್ಲಿಸಲಾಗಿತ್ತು.

ಅನುದಾನಿತ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳು ಸಲ್ಲಿಸಿರುವ 2010 ರಿಂದ 2020 ರವರೆಗಿನ ಮಾಹಿತಿ ಹಾಗೂ ದಾಖಲೆಗಳ ಅನುಸಾರ ಈ ಕೆಳಕಂಡ ಸಂಸ್ಥೆಗಳು ವರ್ಷವಾರು ನಿಯಮಾನುಸಾರ ಬೋಧನಾ ಶುಲ್ಕ- ಅಭಿವೃದ್ಧಿ ಶುಲ್ಕಗಳನ್ನು ಸರ್ಕಾರಕ್ಕೆ ಜಮೆ ಮಾಡದೆ ಬಾಕಿ ಉಳಿಸಿಕೊಂಡಿರುವ ಬಗ್ಗೆ ಉಲ್ಲೇಖ(1) ರಲ್ಲಿ ಮಹಾಲೇಖಪಾಲರ ಲೆಕ್ಕಾಧಿಕಾರಿಗಳು ವರದಿ ನೀಡಿರುತ್ತಾರೆ.

**ಬೋಧನಾ ಶುಲ್ಕ- ಅಭಿವೃದ್ಧಿ ಶುಲ್ಕಗಳನ್ನು ಸರ್ಕಾರಕ್ಕೆ ಜಮೆ ಮಾಡಿದೆ ಬಾಕಿ ಉಳಿಸಿಕೊಂಡಿರುವ ಸಂಸ್ಥೆಗಳ ವಿವರ**

| ಕ್ರಮ ಸಂಖ್ಯೆ | ಸಂಸ್ಥೆ | ಸರ್ಕಾರಕ್ಕೆ ಜಮೆ ಮಾಡದೇ ಉಳಿಸಿಕೊಂಡಿರುವ ಮೊತ್ತ (ರೂ.ಗಳಲ್ಲಿ) |
|---|---|---|
| 1 | ರೂರಲ್ ಪಾಲಿಟೆಕ್ನಿಕ್, ಹುಲಿಕೋಟೆ | 1,06,445 |
| 2 | ಹೆಚ್.ಎಂ.ಎಸ್ ಪಾಲಿಟೆಕ್ನಿಕ್, ತುಮಕೂರು | 155,46,111 |
| 3 | ಸಂಜಯ್ ಮೊಮೋರಿಯಲ್ ಪಾಲಿಟೆಕ್ನಿಕ್, ಸಾಗರ | 3,309 |
| 4 | ಜವಹರಲಾಲ್ ಪಾಲಿಟೆಕ್ನಿಕ್, ಥಾನಕುಶನೂರು | 15,36,372 |
| 5 | ಗೊಮಟೇಶ್ ಪಾಲಿಟೆಕ್ನಿಕ್, ಬೆಳಗಾವಿ | 5,82,469 |
| 6 | ಭರತೇಶ್ ಪಾಲಿಟೆಕ್ನಿಕ್, ಬೆಳಗಾವಿ | 7,59,497 |

| ಕ್ರಮ ಸಂಖ್ಯೆ | ಸಂಸ್ಥೆ | ಸರ್ಕಾರಕ್ಕೆ ಜಮೆ ಮಾಡದೇ ಉಳಿಸಿಕೊಂಡಿರುವ ಮೊತ್ತ (ರೂ.ಗಳಲ್ಲಿ) |
|---|---|---|
| 7 | ಇಂಪ್ಯಾಕ್ಟ್ ಪಾಲಿಟೆಕ್ನಿಕ್, ಬೆಂಗಳೂರು | 16,13,330 |
| 8 | ಕೆ.ವಿ.ಟಿ ಪಾಲಿಟೆಕ್ನಿಕ್, ಚಿಕ್ಕಬಳ್ಳಾಪುರ | 3,29,319 |
| 9 | ಅಂಜುಮಾನ್-ಇ-ಇಸ್ಲಾಂ ಪಾಲಿಟೆಕ್ನಿಕ್, ಗದಗ್ | 71,000 |
| 10 | ಬಾಪೂಜಿ ಪಾಲಿಟೆಕ್ನಿಕ್, ಶಾಬನೂರು | 14,60,291 |
| 11 | ಕೆ.ವಿ.ಜಿ ಪಾಲಿಟೆಕ್ನಿಕ್, ಸೂಳ್ಯ | 4,95,741 |
| 12 | ಡಿ.ಜಿ.ಎಸ್.ಎಂ.ಆರ್ ಪಾಲಿಟೆಕ್ನಿಕ್, ಕುಕನೂರು | 10,18,348 |
| 13 | ಶ್ರೀ. ವೆಂಕಟೇಶ್ವರ ಪಾಲಿಟೆಕ್ನಿಕ್, ಬೆಂಗಳೂರು | 6,65,757 |
| 14 | ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ | 11,85,779 |
| 15 | ಪಿ.ವಿ.ಪಿ ಪಾಲಿಟೆಕ್ನಿಕ್, ಬೆಂಗಳೂರು | 33,63,410 |
| 16 | ಕೆ.ಹೆಚ್.ಕೆ ಪಾಲಿಟೆಕ್ನಿಕ್, ಧಾರವಾಡ | 10,64,646 |
| 17 | ಎಂ.ಇ.ಐ ಪಾಲಿಟೆಕ್ನಿಕ್ (ಹಗಲು), ಬೆಂಗಳೂರು | 19,54,358 |
| 18 | ಜೆ.ಎಸ್.ಎಸ್ ಮಹಿಳಾ ಪಾಲಿಟೆಕ್ನಿಕ್, ಮೈಸೂರು | 1,15,750 |
| 19 | ಜೆ.ಎಸ್.ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್, ಮೈಸೂರು | 1,74,000 |
| 20 | ಎನ್.ವಿ.ಎಸ್ ಪಾಲಿಟೆಕ್ನಿಕ್, ಕಲಬುರ್ಗಿ | 1,72,896 |
| 21 | ಡಿ. ಬನುಮಯ್ಯ ಪಾಲಿಟೆಕ್ನಿಕ್, ಮೈಸೂರು | 2,13,500 |
| 22 | ಅಲ್-ಖತೀಬ್ ಪಾಲಿಟೆಕ್ನಿಕ್, ಬೆಂಗಳೂರು | 11,80,604 |
| 23 | ಎಸ್.ಎನ್.ಎಸ್ ಪಾಲಿಟೆಕ್ನಿಕ್, ಸುಂಕದಕಟ್ಟೆ | 6,650 |
| 24 | ಎಂ.ಇ.ಐ ಸಂಜೆ ಪಾಲಿಟೆಕ್ನಿಕ್, ಬೆಂಗಳೂರು | 36,672 |
| 25 | ಎ.ಪಿ.ಎಸ್ ಪಾಲಿಟೆಕ್ನಿಕ್, ಬೆಂಗಳೂರು | 1,83,450 |
| | ಒಟ್ಟು | **3,38,39,704** |

(ರೂಪಾಯಿ ಮೂರು ಕೋಟಿ, ಮೂವತ್ತೆಂಟು ಲಕ್ಷ, ಮೂವತ್ತೊಂಬತ್ತು ಸಾವಿರದ ಏಳು ನೂರು ನಾಲ್ಕು ಮಾತ್ರ)

ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ಪ್ರತಿ ವರ್ಷ ಅನುದಾನಿತ ಕೋರ್ಸ್‌ಗಳಡಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಂದ ಬೋಧನಾ-ಶುಲ್ಕ ಹಾಗೂ ಅಭಿವೃದ್ಧಿ ಶುಲ್ಕಗಳನ್ನು ಸಂಗ್ರಹಣೆ ಮಾಡಿ, ಸದರಿ ಅನುದಾನದಲ್ಲಿ ಶೇ. 50% ನ್ನು ಸರ್ಕಾರಕ್ಕೆ ಜಮೆ ಮಾಡುವ ಬಗ್ಗೆ ಸೂಕ್ತ ಆದೇಶ ಹಾಗೂ ನಿರ್ದೇಶನವಿದ್ದರೂ ಸಹ ಕಾಲಕಾಲಕ್ಕೆ ಜಮೆ ಮಾಡದಿರುವುದನ್ನು ಮಹಾಲೇಖಪಾಲರ ಲೆಕ್ಕಾಧಿಕಾರಿಗಳು ಆಕ್ಷೇಪಿಸಿರುತ್ತಾರೆ. ಸರ್ಕಾರಕ್ಕೆ ಜಮೆ ಮಾಡದೇ ಉಳಿಸಿರುವ ಮೊತ್ತವನ್ನು ಶೀಘ್ರವಾಗಿ

ಸರ್ಕಾರಕ್ಕೆ ಜಮೆ ಮಾಡಲು ಕ್ರಮಕೈಗೊಳ್ಳದಿದ್ದರೆ, ಸದರಿ ಪ್ರಕರಣವನ್ನು ಸಿ&ಎಜಿ ವರದಿಗೆ ಸೇರ್ಪಡಿಸುವ ಸಾಧ್ಯತೆ ಇರುತ್ತದೆ.

ಆದುದರಿಂದ ಮೇಲೆ ತಿಳಿಸಿದ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು ದಿನಾಂಕ 30.12.2021 ರೊಳಗೆ ಬಾಕಿ ಉಳಿಸಿಕೊಂಡಿರುವ ಬೋಧನಾ ಶುಲ್ಕ- ಅಭಿವೃದ್ಧಿ ಶುಲ್ಕವನ್ನು ಸರ್ಕಾರಕ್ಕೆ ಜಮೆ ಮಾಡಿ, ಚಲನ್ ಅನ್ನು ಆಯುಕ್ತರರ ಕಛೇರಿಗೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ. ನಿಗಧಿತ ಅವಧಿಯಲ್ಲಿ ಜಮೆ ಮಾಡದಿರುವ ಅನುದಾನಿತ ಪಾಲಿಟೆಕ್ನಿಕ್‌ಗಳ ವಿರುದ್ಧ ಶಿಸ್ತುಕ್ರಮವನ್ನು ಜಾರಿಗೊಳಿಸಲಾಗುವುದು, ಇದಕ್ಕೆ ಅವಕಾಶ ನೀಡದೇ ದಿನಾಂಕ 30.12.2021 ರೊಳಗೆ ಪೂರ್ಣ ಅನುದಾನವನ್ನು ಜಮೆ ಮಾಡಲು ಕ್ರಮವಹಿಸಲು ಈ ಮೂಲಕ ಎಲ್ಲಾ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಆದೇಶಿಸಲಾಗಿದೆ.

*(ಮಾನ್ಯ ಆಯುಕ್ತರಿಂದ ಕರಡು ಅನುಮೋದಿಸಲ್ಪಟ್ಟಿದೆ)*

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ.**

**ಇವರಿಗೆ,**

1 ಎಲ್ಲಾ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ
(ಮುಖ್ಯವಾಗಿ ಪಟ್ಟಿಯಲ್ಲಿರುವ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ)

**ಪ್ರತಿ,**

1 ನಿರ್ದೇಶಕರು, ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
2 ಜಂಟಿ ನಿರ್ದೇಶಕರು (ಆಡಳಿತ), ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
3 ಆಡಳಿತಾಧಿಕಾರಿಗಳು, ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
4 ಲೆಕ್ಕಾಧಿಕಾರಿಗಳು (ಬಿಲ್ಸ್), ಆಯುಕ್ತಾಲಯ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು